**ಸಾಕ್ಷಿಗೆ ದಿನಾಂಕ: 06.12.2022 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1 ಪರ ವಕೀಲರಾದ ಶ್ರೀ BKS ರವರಿಂದಃ**

ಪ್ರತಿವಾದಿಗಳು ದಾವಾ ಆಸ್ತಿಯ ಮೇಲೆ ನನ್ನ ಕಬ್ಜಾವಹಿವಾಟಕ್ಕೆ ತಕರಾರು ಮಾಡಿರುವುದರಿಂದ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ. 78/1+3+4+5/2. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬಸಯ್ಯ ಮೂಗಯ್ಯ ಜಮಳೂರು ಇವರ ಆಸ್ತಿ, ಉತ್ತರಕ್ಕೆ ಮಂಜುಳಾ ರಾಚಯ್ಯ ಪೂಜಾರ ಇವರ ಆಸ್ತಿ ಹಾಗೂ ದಕ್ಷಿಣಕ್ಕೆ ಸಂದೀಪ ದೇಶಪಾಂಡೆ ಇವರ ಆಸ್ತಿ ಇದೆ. ದಾವಾ ಆಸ್ತಿಯ ಚಕಬಂದಿಯನ್ನು ದಾವಾ ಹೂಡುವ ಸಮಯದಲ್ಲಿ ನನ್ನ ವಕೀಲರಿಗೆ ತಿಳಿಸಿರುತ್ತೇನೆ.

ದಾವಾ ಹೂಡುವ ಮೊದಲೇ ದಾವಾ ಆಸ್ತಿಯು ಸರ್ವೇ ಆಗಿರುತ್ತದೆ. ಸದರಿ ಸರ್ವೇ ಹಾಗೂ ಸರ್ವೆ ನಕಾಶೆ ಸರಿಯಿಲ್ಲ ಎಂದು ಪ್ರತಿವಾದಿಗಳು ಸಹಾಯಕ ನಿರ್ದೇಶಕರು, ಭೂಮಾಪಕರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ಯಥಾಸ್ಥಿತಿ ಕಾಪಾಡಬೇಕೆಂದು ತಡೆಯಾಜ್ಞೆ ಆಗಿರುತ್ತದೆ ಎಂದರೆ ನಿಜ. ಸದರಿ ಪ್ರಕರಣ ಇತ್ಯರ್ಥಗೊಳ್ಳುವವರೆಗೂ ಈ ದಾವೆಯನ್ನು ಹೂಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಈ ದಾವೆಯನ್ನು ಹೂಡಿದ ನಂತರ ಪ್ರತಿವಾದಿಗಳು ಸರ್ವೆ ಪ್ರಶ್ನಿಸಿ ಪ್ರಕರಣ ದಾಖಲಿಸಿರುತ್ತಾರೆ ಎಂದು ಹೇಳುತ್ತಾರೆ.

ಸರ್ವೆ ನಂ. 78/1+3+4+5/2 ಕ್ಷೇತ್ರ 01 ಎಕರೆ 33 ಗುಂಟೆ 8 ಆನೆ ಯನ್ನು ನನ್ನ ಗಂಡನು ನನ್ನ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ

ಆಸ್ತಿಯು ನನ್ನ ಗಂಡ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಸದರಿ ಆಸ್ತಿಯನ್ನು ನನ್ನ ಗಂಡನ ತಂದೆ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಮಾಡಿದ ನಂತರ ಯಾರಿಂದಲೂ ಸಹ ಯಾವುದೇ ತಕರಾರು ಇರಲಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಆಸ್ತಿ ಖರೀದಿಸಿದ ನಂತರ ನಮ್ಮ ಆಸ್ತಿಯ ಚಕಬಂದಿಗೆ ತಕರಾರು ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ಸರ್ವೆ ನಂ. 78/1+2+3+4+5/1 ಬಿ ಇದರ ಕ್ಷೇತ್ರ 03 ಎಕರೆ ಪೈಕಿ 02 ಎಕರೆ ಮಹಾದೇವಪ್ಪ ಬಡಿಗೇರ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನಿಜ. 1 ನೇ ಪ್ರತಿವಾದಿಯ ಗಂಡ 1 ನೇ ಪ್ರತಿವಾದಿಯಳ ಆಸ್ತಿಯಲ್ಲಿ ಗ್ಯಾರೇಜ ಹಾಕಿಕೊಂಡಿರುತ್ತಾರೆ ಎಂದರೆ ನಿಜ. ಸದರಿ ಗ್ಯಾರೇಜ ಹಾಕುವ ಸಮಯದಲ್ಲಿ ನಾನು 1 ನೇ ಪ್ರತಿವಾದಿಗಳಿಗೆ ಆಸ್ತಿಗಳನ್ನು ಅಳತೆ ಮಾಡಿಸಿಕೊಂಡು ನಂತರ ನೀವು ಗ್ಯಾರೇಜ ಹಾಕಿ ಎಂದು ಹೇಳಿರುತ್ತೇನೆ. ಈ ರೀತಿ ಅಳತೆ ಮಾಡಿ ನಂತರ ಗ್ಯಾರೇಜ ಹಾಕಿ ಎಂದು ಪ್ರತಿವಾದಿಗಳಿಗೆ ಹೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗ್ಯಾರೇಜನ್ನು 2014 ರಲ್ಲಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು 2016 ರಲ್ಲಿ ಹಾಕಿರುತ್ತಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಗಂಡ 2014 ರಿಂದ ಅವರ ಆಸ್ತಿಯಲ್ಲಿ ಗ್ಯಾರೇಜ ನಡೆಸುತ್ತಿದ್ದಾರೆ ಎಂದರೆ ನಿಜ. ನಾನು ಇದನ್ನು ಪ್ರಶ್ನಿಸಿ ಪೊಲೀಸ ಠಾಣೆಯಲ್ಲಿ ದೂರು ಸಹ ನೀಡಿರುತ್ತೇನೆ. 1 ನೇ ಪ್ರತಿವಾದಿಯ ಗಂಡ ಪರವಾಣಿಗೆ ಪಡೆದುಕೊಂಡು ಗ್ಯಾರೇಜ ಹಾಕಿರುತ್ತಾರೆ ಎಂದರೆ ನಿಜ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳವನ್ನು ಪರೀಶೀಲಿಸಿ ಪ್ರತಿವಾದಿಗಳ ಕಬ್ಜೆಯನ್ನು ಖಚಿತಪಡಿಸಿ ಲೈಸೆನ್ಸ ನೀಡಿರುತ್ತಾರೆ

ಎಂದರೆ ಸಾಕ್ಷಿಯು ನೀಡಿರಬಹುದು ಆದರೆ ನಾವು ಅಳತೆ ಮಾಡಿದಾಗ ಸದರಿ ಗ್ಯಾರೇಜ್ ಅವರ ಆಸ್ತಿ ದಾಟಿ ನಮ್ಮ ಆಸ್ತಿಯಲ್ಲಿ ಬಂದಿದೆ ಎಂದು ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ.

ನಮ್ಮ ಆಸ್ತಿಯನ್ನು ಅಳತೆ ಮಾಡಲು 2016 ರಲ್ಲಿ ಅರ್ಜಿ ನೀಡಿರುತ್ತೇನೆ, ದಿಃ 10.05.2017 ರಂದು ನಮ್ಮ ಆಸ್ತಿಯನ್ನು ಅಳತೆ ಮಾಡಲು ಬಂದಾಗ ಪ್ರತಿವಾದಿಗಳು ಮರಳಿ ಕಳುಹಿಸಿದ್ದು ನಂತರ ದಿಃ 09.11.2018 ರಂದು ಪೊಲೀಸರ ಸಮಕ್ಷಮ ಅಳತೆಯನ್ನು ಮಾಡಿರುತ್ತಾರೆ. ದಿಃ 10.05.2017 ರಂದು ಸರ್ವೆ ಮಾಡಲು ಅಧಿಕಾರಿಗಳು ಬಂದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೆ ಅಧಿಕಾರಿಗಳು ಬಂದಿದ್ದರು ಹಾಗೂ ಅವರನ್ನು ಪ್ರತಿವಾದಿಗಳು ತಕರಾರು ಮಾಡಿ ಮರಳಿ ಕಳುಹಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳನ್ನು ಪ್ರತಿವಾದಿಗಳು ತಮ್ಮ ರಾಜಕೀಯ ಪ್ರಭಾವದಿಂದ ಅಳತೆ ಮಾಡಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಮರಳಿ ಕಳುಹಿಸಿರುತ್ತಾರೆ. ಸರ್ವೆ ಅಧಿಕಾರಿಗಳು ಅಳತೆ ಮಾಡಲು ಬಂದಾಗ ಜಮೀನುಗಳಲ್ಲಿ ಬೆಳೆಗಳು ಇರುವುದರಿಂದ ಅಡಚಣೆ ಆಗುತ್ತದೆ ಎಂದು ಮರಳಿ ಹೋಗಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಅಸ್ತಿಯಲ್ಲಿ ಯಾವುದೇ ಬೆಳೆಗಳು ಇರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ಅಧಿಕಾರಿಗಳು ಪ್ರತಿವಾದಿಗಳು ತಮ್ಮ ರಾಜಕೀಯ ಪ್ರಭಾವದಿಂದ ಮರಳಿ ಕಳುಹಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು 2005 ರಲ್ಲಿ ಖರೀದಿ ಮಾಡಿದ ನಂತರ ಅವರ ಆಸ್ತಿಯಲ್ಲಿ

ಅವರು ಶಾಂತಿಯುತ ಕಬ್ಜೆಯಲ್ಲಿ ಹಾಗೂ ನಮ್ಮ ಆಸ್ತಿಯಲ್ಲಿ ನಾನು ಶಾಂತಿಯುತ ಕಬ್ಜೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಆಸ್ತಿಯಲ್ಲಿ ಶಾಂತಿಯುತ ಕಬ್ಜೆಯಲ್ಲಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದರಿಂದ, ಅಲಿಸಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**